
## ಘಟಕಕ್ಕೆ ತಗಲುವ ಖರ್ಚು

| ಪರಿಕರಗಳು | ಯೂನಿಟ್ ದರ (ರೂ) | |
|---|---|---|
| | 20′ x 30′ | 20′ x 50′ |
| ಮೈಕ್ರೋ ಸ್ಪ್ರಿಂಕ್ಲರ್ | 600 | 800 |
| ಪಂಪುಗಳು | 4400 | 6100 |
| ಲೋಹದ 'ಟಿ' | 2400 | 4000 |
| ಕವಾಟಗಳು, ಸಂಯೋಜಕ ಸಕ್ಷನ್ | 1800 | 1800 |
| ಮೋಟರ್ ಪಂಪು (1HP) | 10000 | 10000 |
| ಹಿತ್ತಾಳೆಯ ಗನ್ ಮತ್ತು ಹೋಸ್ ಪೈಪ್ | 2300 | 2300 |
| ವಿವಿಧ ವೆಚ್ಚ | 1000 | 1500 |
| ಅಳವಡಿಕೆಯ ವೆಚ್ಚ | 4000 | 8000 |
| ಒಟ್ಟು | 26500 | 34500 |
| ವಿದ್ಯುಚ್ಚಕ್ತಿ ಪೂರೈಕೆ ಕಡ್ಡಾಯ | | |

ಪುನರ್ವಿನ್ಯಾಸಗೊಳಿಸಿದ ಸೋಂಕು ನಿವಾರಕ ಘಟಕವನ್ನು ಸಿ.ಎಸ್.ಆರ್.ಟಿ.ಐ., ಮೈಸೂರು ಮತ್ತು ಸೇಲಂ, ಕೊಡತಿ ಹಾಗೂ ಬಿದರಗುಪ್ಪೆಗಳಲ್ಲಿನ ಪ್ರಾದೇಶಿಕ ಅಂಗ ಸಂಸ್ಥೆಗಳಲ್ಲಿ ಪರೀಕ್ಷಿಸಲಾಗಿದ್ದು ಈ ಘಟಕ ಪರಿಣಾಮಕಾರಿಯಾಗಿದೆಯೆಂದು ಸಾದರ ಪಟ್ಟಿರುತ್ತದೆ.

### ಅನುಕೂಲಗಳು

- ಸ್ವಯಂಚಾಲಿತ ಸೋಂಕು ನಿವಾರಣೆ ಮಾನವ ರಹಿತ ಸಿಂಪರಣೆಯ ಕ್ರಮವಾಗಿದ್ದು ರಾಸಾಯನಿಕಗಳಿಂದ ಉಂಟಾಗಬಹುದಾದ ಹಾನಿಯನ್ನು ತಡೆಗಟ್ಟ ಬಹುದಾಗಿದೆ
- ಸ್ವಯಂಚಾಲಿತ ಸೋಂಕು ನಿವಾರಣಾ ತಾಂತ್ರಿಕತೆ ರೈತ ಸ್ನೇಹಿ, ಮಿತವ್ಯಯ ಹಾಗೂ ಸುಲಭವಾಗಿ ಅಳವಡಿಸಬಹುದಾಗಿರುತ್ತದೆ
- ಈ ಪದ್ಧತಿಯಿಂದ ಮಾನವ ಶ್ರಮ, ಸಮಯ ಮತ್ತು ಸೋಂಕು ನಿವಾರಣೆಯಲ್ಲಿನ ಪರಿಶ್ರಮವನ್ನು ಕಡಿಮೆ ಮಾಡಬಹುದಾಗಿದೆ
- ಈ ಘಟಕವನ್ನು ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿಯೂ ಅಳವಡಿಸಬಹುದು




**20 ಅಡಿ X 30 ಅಡಿ ಅಳತೆಯ ಸಾಕಾಣಿಕೆ ಮನೆಗೆ ಅಳವಡಿಸಬಹುದಾದ ಮಾದರಿ**

**ಪಠ್ಯ:** ಎ.ಆರ್. ನರಸಿಂಹ ನಾಯಕ,
ಜಿ. ಮಲ್ಲಿಕಾರ್ಜುನ್, ಸತೀಶ್ ವರ್ಮ
ಎಂ. ಬಾಲವೆಂಕಟಸುಬ್ಬಯ್ಯ, ಎ.ವಿ. ಮೇರಿ ಜೋಸೆಫ಼
ಮತ್ತು ವಿ. ಶಿವಪ್ರಸಾದ್
**ಅನುವಾದಕರು:** ಜೆ. ಬಿ. ನರೇಂದ್ರಕುಮಾರ್

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ನಿರ್ದೇಶಕರು
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಮಾನಂದವಾಡಿ ರಸ್ತೆ
ಶ್ರೀರಾಂಪುರ, ಮೈಸೂರು - 570008
ಫೋನ್: 0821-2362757, 2362406
ಫ್ಯಾಕ್ಸ್ : 0821-2362845
www.csrtimys.res.in email: cstrimys.csb@nic.in

Copies: 500 February 2019 Design & Layout: J. Justin Kumar

# ರೇಷ್ಮೆ ಹುಳು ಸಾಕಾಣಿಯಲ್ಲಿ ಸ್ವಯಂಚಾಲಿತ ಸೋಂಕು ನಿವಾರಣಾ ಘಟಕ

**(ರೈತನ ಆವಿಷ್ಕಾರ)**






ಶ್ರೀ ಎಸ್.ವಿ. ರಾಜಶೇಖರಪ್ಪ
ಯಲಂಗನಹಳ್ಳಿ
ಹಾಸನ, ಕರ್ನಾಟಕ



**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
(ISO 9001: 2015 ಪ್ರಮಾಣೀಕೃತ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ
ಮೈಸೂರು – 570008

ಸಾಮಾನ್ಯವಾಗಿ ರೇಷ್ಮೆ ಹುಳುವಿಗೆ ತಗಲುವ ರೋಗಗಳಿಂದ ರೇಷ್ಮೆ ಗೂಡು ಉತ್ಪಾದನೆ ಕುಂಠಿತವಾಗುತ್ತದೆ. ರೇಷ್ಮೆ ಹುಳುವಿಗೆ ತಗಲುವ ಸೋಂಕಿನಿಂದ ಹುಳು ಸಾಕುವ ಮನೆ ಮತ್ತು ಪರಿಕರಗಳಿಗೆ ಸೋಂಕು ತಗಲುತ್ತದೆ. ಇದು ಸೋಂಕುಗಳ ಉಗಮ ಮತ್ತು ಹರಡುವಿಕೆಗೆ ಮೂಲ ಕಾರಣವಾಗುತ್ತದೆ. ಸಮರ್ಪಕ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ ಕಾಪಾಡುವುದರಿಂದ ರೋಗ ರಹಿತ ವಾತಾವರಣ ಸೃಷ್ಟಿ ಮಾಡಬಹುದು. ಸಾಮಾನ್ಯವಾಗಿ ರಾಸಾಯನಿಕ ಬಳಸಿ ಸೋಂಕು ನಿವಾರಣೆ ಮಾಡುವುದರಿಂದ ಎಲ್ಲಾ ರೋಗಗಳನ್ನೂ ಪರಿಣಾಮಕಾರಿಯಾಗಿ ನಿಯಂತ್ರಿಸಬಹುದಾಗಿರುತ್ತದೆ. ಪ್ರಸ್ತುತ ಅನೇಕ ಬಗೆಯ ಸೋಂಕು ನಿವಾರಕಗಳನ್ನು ಶಿಫಾರಸ್ಸು ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬ್ಲೀಚಿಂಗ್ ಪೌಡರ್, ಸ್ಯಾನಿಟೆಕ್, ಸೆರಿ ಕ್ಲೋರ್, ಡೆಕಾಲ್, ಅಸ್ತ್ರ ಹಾಗೂ ಸೆರಿ ಫ್ಲಿಟ್.

- ಪ್ರಸ್ತುತ ಸೋಂಕು ನಿವಾರಕ ಸಿಂಪಡಣೆಯನ್ನು ಮಾನವ ಚಾಲಿತ ಪದ್ಧತಿಯಲ್ಲಿ ಮಾಡಲಾಗುತ್ತಿದೆ. ಈ ಪದ್ಧತಿಯಲ್ಲಿ ರೇಷ್ಮೆ ಬೆಳೆಗಾರ ಹುಳು ಸಾಕುವ ಮನೆಯೊಳಗಿರುವುದು ಹಾಗೂ ರಾಸಾಯನಿಕಗಳ ಸಂಪರ್ಕಕ್ಕೆ ಬರುವುದು ಅನಿವಾರ್ಯವಾಗುತ್ತದೆ

- ರೇಷ್ಮೆ ಬೆಳೆಗಾರರು ಶಿಫಾರಸ್ಸು ಮಾಡಿದ ಮುಖವಾಡ, ಕೈ ಚೀಲ, ಜಲನಿರೋದಕ ಶೂ ಮತ್ತು ಅಂಗಿ ಧರಿಸದೆ ಸೋಂಕು ನಿವಾರಣೆ ಮಾಡುವುದರಿಂದ ಆರೋಗ್ಯಕ್ಕೆ ಹಾನಿಯುಂಟಾಗುತ್ತದೆ





ಶ್ರೀ ಎಸ್. ವಿ. ರಾಜಶೇಖರಪ್ಪ ಎಂಬ ಪ್ರಗತಿಪರ ರೈತರು ಸ್ವಯಂ ಚಾಲಿತ ಸೋಂಕು ನಿವಾರಣ ತಾಂತ್ರಿಕತೆಯನ್ನು ವಿನ್ಯಾಸಗೊಳಿಸಿ ತಮ್ಮ ಹುಳು ಸಾಕಾಣಿಕಾ ಮನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಅಳವಡಿಕೆಯಲ್ಲಿ ನೀರಾವರಿಗೆ ಬಳಸುವ ಪಂಪುಗಳು ಮತ್ತು ಸ್ಪ್ರಿಂಕ್ಲರ್‌ಗಳನ್ನು ಬಳಸಲಾಗಿದೆ. ಈ ತಾಂತ್ರಿಕತೆಯ ಅನ್ವೇಷಣೆಗಾಗಿ ಸಿ.ಎಸ್.ಆರ್.ಟಿ.ಐ., ಮೈಸೂರು ಶ್ರೀಯುತರಿಗೆ ಬಹುಮಾನ ನೀಡಿ ಗೌರವಿಸಿದೆ.



**ಸಿ.ಎಸ್.ಆರ್.ಟಿ.ಐ., ಮೈಸೂರಿನ ಪ್ರಯೋಗಾಲಯದಲ್ಲಿ ಈ ತಾಂತ್ರಿಕತೆಯ ಸುಧಾರಣೆ**

ರೈತರು ಅವಿಷ್ಕರಿಸಿದ ಸ್ವಯಂಚಾಲಿತ ಸೋಂಕು ನಿವಾರಕ ಘಟಕವನ್ನು ಪ್ರಾಯೋಗಿಕವಾಗಿ ಸಿ.ಎಸ್.ಆರ್.ಟಿ.ಐ., ಮೈಸೂರಿನಲ್ಲಿ ಪುನರ್ವಿನ್ಯಾಸಗೊಳಿಸಿ ಇದರ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ.

- ಪಂಪುಗಳ ಜೋಡಣೆಯನ್ನು ಪುನರ್ವಿನ್ಯಾಸಗೊಳಿಸಿ ಅವುಗಳಿಂದ ಆಗಬಹುದಾದ ಅಡಚಣೆಗಳನ್ನು ತಪ್ಪಿಸಲಾಗಿದೆ.

- ಹನಿ ನೀರಾವರಿ ಪದ್ಧತಿಯಲ್ಲಿ ಬಳಸುವ ಸ್ಪ್ರಿಂಕ್ಲರ್‌ಗಳ ಬದಲು ಸೂಕ್ಷ್ಮ ಸ್ಪ್ರಿಂಕ್ಲರ್‌ಗಳನ್ನು ಅಳವಡಿಸಿ ದ್ರಾವಣದ ಸಿಂಪಡಣೆಯನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ನಿಯಂತ್ರಿಸಲಾಗಿದೆ.

ಸುಧಾರಿತ ಪದ್ಧತಿಯನ್ನು ಸಿ.ಎಸ್.ಆರ್.ಟಿ.ಐ., ಮೈಸೂರಿನ ಪ್ರಯೋಗಾಲಯದಲ್ಲಿ ಪರಿವೀಕ್ಷಿಸಲಾಗಿದೆ.



ಸಿ.ಎಸ್.ಆರ್.ಟಿ.ಐ., ಮೈಸೂರಿನಲ್ಲಿರುವ ಪರೀಕ್ಷಾ ಘಟಕ




ಮೋಟರ್ ಅಳವಡಿಸಿರುವುದು



ನಿಯಂತ್ರಕ ವಾಲ್ವ್



ಮೈಕ್ರೋ ಸ್ಪ್ರಿಂಕ್ಲರ್



ಸ್ಪ್ರೇ ಗನ್